ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ : 263

ಸದಸ್ಯರ ಹೆಸರು : ಡಾ.ವೈ.ಎ ನಾರಾಯಣಸ್ವಾಮಿ (ಶಿಕ್ಷಕರ ಕ್ಷೇತ್ರ)

ಉತ್ತರಿಸುವ ಸಚಿವರು : ಪೌರಾಡಳಿತ, ತೋಟಗಾರಿಕೆ ಮತ್ತು ರೇಷ್ಮೆ ಸಚಿವರು

ಉತ್ತರಿಸಬೇಕಾದ ದಿನಾಂಕ : 22.09.2020

<table>
<tr><th>ಕ್ರ.ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ರಾಜ್ಯದಲ್ಲಿರುವ ತೋಟಗಾರಿಕಾ ಬೆಳೆ ಬೆಳೆಯುವ ಪ್ರದೇಶ ಎಷ್ಟು; ಈ ವಿಸ್ತೀರ್ಣದಲ್ಲಿ ಅತೀ ಮುಖ್ಯವಾದ ತೋಟದ ಬೆಳೆಗಳು ಯಾವುವು;</td><td>2018-19ನೇ ಸಾಲಿನ ಅಂಕಿ ಅಂಶಗಳನ್ವಯ ರಾಜ್ಯದಲ್ಲಿ ತೋಟಗಾರಿಕೆ ಬೆಳೆ ಬೆಳೆಯುವ ಪ್ರದೇಶವು 23.25 ಲಕ್ಷ ಹೆಕ್ಟೇರ್ ರಷ್ಟಿರುತ್ತದೆ.<br>ಇದರಲ್ಲಿ ಅತೀ ಮುಖ್ಯವಾಗಿ ಬೆಳೆಯುವ ತೋಟಗಾರಿಕಾ ಬೆಳೆಗಳೆಂದರೆ;
<table>
<tr><th>ಕ್ರ. ಸಂ.</th><th>ಪ್ರಮುಖ ಬೆಳೆಗಳು</th><th>ಪ್ರದೇಶ (ಲಕ್ಷ ಹೆ.)</th></tr>
<tr><td>1</td><td>ತೋಟದ ಬೆಳೆಗಳು (ತೆಂಗು, ಅಡಿಕೆ, ಗೋಡಂಬಿ, ಇತ್ಯಾದಿ),</td><td>11.29</td></tr>
<tr><td>2</td><td>ತರಕಾರಿ ಬೆಳೆಗಳು (ಟೊಮ್ಯಾಟೊ, ಆಲೂಗಡ್ಡೆ, ಈರುಳ್ಳಿ, ಬದನೆ ಇತ್ಯಾದಿ)</td><td>4.80</td></tr>
<tr><td>3</td><td>ಹಣ್ಣುಗಳು (ಮಾವು, ಬಾಳೆ, ದಾಳಿಂಬೆ, ಸಪೋಟ, ಪಪ್ಪಾಯ ಇತ್ಯಾದಿ)</td><td>3.88</td></tr>
<tr><td>4</td><td>ಸಾಂಬಾರು ಬೆಳೆಗಳು (ಶುಂಠಿ, ಮೆಣಸಿನಕಾಯಿ, ಅರಿಶಿನ ಇತ್ಯಾದಿ)</td><td>2.98</td></tr>
<tr><td>5</td><td>ವಾಣಿಜ್ಯ ಪುಷ್ಪಗಳು (ಗುಲಾಬಿ, ಜರ್ಬೆರಾ, ಕಾರ್ನೇಷನ್ ಇತ್ಯಾದಿ)</td><td>0.27</td></tr>
<tr><td>6</td><td>ಔಷಧೀಯ ಮತ್ತು ಸುಗಂಧಿತ ಬೆಳೆಗಳು (ಅಶ್ವಗಂಧ, ಶ್ರೀಗಂಧ, ಸರ್ಪಗಂಧ ಇತ್ಯಾದಿ)</td><td>0.02</td></tr>
</table>
</td></tr>
</table>

ಆ) ಈ ತೋಟದ ಬೆಳೆಗಳಿಗೆ ಬೆಳೆ ವಿಮೆ ಯೋಜನೆ ಜಾರಿಯಲ್ಲಿದೆಯೇ: ಇದ್ದಲ್ಲಿ, ಕೋಲಾರ ಜಿಲ್ಲೆಯಲ್ಲಿ ಕಳೆದ 3 ವರ್ಷಗಳಿಂದ ರೈತರಿಗೆ ದೊರೆತಿರುವ ಬೆಳೆ ವಿಮಾ ಯೋಜನೆಯ ಮೊತ್ತ ವಿಷ್ಟು:
(ತಾಲ್ಲೂಕುವಾರು ಮಾಹಿತಿ ನೀಡುವುದು)

ರಾಜ್ಯದಲ್ಲಿ ತೋಟಗಾರಿಕೆ ಇಲಾಖೆ ವತಿಯಿಂದತೋಟದ ಬೆಳೆಗಳಿಗೆ ಮರುವಿನ್ಯಾಸಗೊಳಿಸಲಾದ ಹವಾಮಾನ ಆಧಾರಿತ ಬೆಳೆ ವಿಮೆ ಯೋಜನೆಯುಜಾರಿಯಲ್ಲಿರುತ್ತದೆ. ಸದರಿ ಯೋಜನೆಯಡಿ 2017-18 ಮತ್ತು 2018-19 ರ ಮುಂಗಾರು ಹಂಗಾಮಿನಲ್ಲಿ ಮಾವು ಬೆಳೆಗೆ ಕೋಲಾರ ಜಿಲ್ಲೆಯಲ್ಲಿ ರೈತರಿಗೆ ವಿಮಾ ಸಂಸ್ಥೆಯವರಿಂದ ಒಟ್ಟು ಇತ್ಯರ್ಥಪಡಿಸಿರುವ ಬೆಳೆ ವಿಮೆ ಪರಿಹಾರದ ತಾಲ್ಲೂಕುವಾರು ವಿವರ ಮುಂದಿನಂತಿದೆ.

(ಮೊತ್ತ ರೂ. ಲಕ್ಷಗಳಲ್ಲಿ)

| ಕ್ರ ಸಂ | ತಾಲ್ಲೂಕು | 2017-18 | | 2018-19 | |
|---|---|---|---|---|---|
| | | ರೈತ ಫಲಾನುಭವಿಗಳ ಸಂಖ್ಯೆ | ಬೆಳೆ ವಿಮೆ ಪರಿಹಾರದ ಮೊತ್ತ | ರೈತ ಫಲಾನುಭವಿಗಳ ಸಂಖ್ಯೆ | ಬೆಳೆ ವಿಮೆ ಪರಿಹಾರದ ಮೊತ್ತ |
| 1 | ಬಂಗಾರಪೇಟೆ | 68 | 26.53 | 26 | 13.29 |
| 2 | ಕೋಲಾರ | 391 | 35.87 | 431 | 99.31 |
| 3 | ಮಾಲೂರು | 19 | 5.41 | 145 | 68.69 |
| 4 | ಮುಳಬಾಗಿಲು | 75 | 26.47 | 239 | 87.57 |
| 5 | ಶ್ರೀನಿವಾಸಪುರ | 1854 | 236.23 | 2482 | 611.37 |
| | ಒಟ್ಟು | 2407 | 330.52 | 3323 | 880.22 |

2019-20 ನೇ ಸಾಲಿನ ಮಂಗಾರು ಹಂಗಾಮಿಗೆ ಸಂಬಂಧಿಸಿದಂತೆ, ವಿಮಾ ಘಟಕವಾರು ವಿಮಾ ಮೊತ್ತವನ್ನು ಲೆಕ್ಕಾಚಾರ ಮಾಡಲಾಗಿದ್ದು, ಸಂಬಂಧಿಸಿದ ವಿಮಾ ಕಂಪನಿ ವತಿಯಿಂದ ಪರಿಶೀಲನಾ ಕಾರ್ಯ ಪ್ರಗತಿಯಲ್ಲಿದೆ.

ಇ) ತೋಟದ ಬೆಳೆಗಳಿಗೆ ಬೆಳೆ ವಿಮೆ ಯೋಜನೆಯ ಸಂಪೂರ್ಣ ಸೌಲಭ್ಯ ದೊರಕಿಸಲು ಇಲಾಖೆಯು ತಂತ್ರಜ್ಞಾನವನ್ನು ಬಳಸಲಾಗುತ್ತಿದೆಯೇ?
(ಮಾಹಿತಿ ನೀಡುವುದು)

-ಹೌದು-

ಹವಾಮಾನ ವೈಪರೀತ್ಯದಿಂದ ಬೆಳೆ ವಿಫಲವಾದಾಗ ರೈತರಿಗೆ ವಿಮಾ ರಕ್ಷಣೆಯನ್ನು ಮತ್ತು ಹಣಕಾಸಿನ ಬೆಂಬಲವನ್ನು ನೀಡುವುದು ಮರು ವಿನ್ಯಾಸಗೊಳಿಸಲಾದಹವಾಮಾನ ಆಧಾರಿತ ಬೆಳೆ ವಿಮೆ ಯೋಜನೆಯ ಪ್ರಮುಖ ಉದ್ದೇಶವಾಗಿರುತ್ತದೆ. ಸಾಂಪ್ರದಾಯಿಕ ವ್ಯವಸ್ಥೆಯಲ್ಲಿ

| | | |
|---|---|---|
| | | ವಿಮಾ ಯೋಜನೆಯ ಅನುಷ್ಠಾನದಲ್ಲಿ ಆಗುವ ವಿಳಂಬ ಹಾಗೂ ಇತರೆ ನ್ಯೂನತೆಗಳನ್ನು ತಪ್ಪಿಸಿ ಪರಿಣಾಮಕಾರಿಯಾಗಿ ಅನುಷ್ಠಾನಗಳಿಸಲು 2016-17ನೇ ಸಾಲಿನ ಮುಂಗಾರು ಹಂಗಾಮಿನಲ್ಲಿ "ಸಂರಕ್ಷಣೆ" ತಂತ್ರಾಂಶವನ್ನು ಅಭಿವೃದ್ಧಿ ಪಡಿಸಿದ್ದು, ಬ್ಯಾಂಕ್ ಗಳು, ವಿಮಾ ಕಂಪನಿಗಳು, ಸರ್ಕಾರಿ ಇಲಾಖೆಗಳು ಮತ್ತು ರೈತರು ಆನ್ ಲೈನ್ ಸೌಲಭ್ಯದ ಬಳಕೆದಾರರಾಗಿರುತ್ತಾರೆ. ಆನ್ ಲೈನ್ ಅರ್ಜಿಯಿಂದ ಆರಂಭಗೊಂಡು ರೈತರ ಉಳಿತಾಯ ಖಾತೆಗೆ ಕ್ಲೈಮ್ ಮೊತ್ತ ಜಮೆಯಾಗುವವರೆಗೂ ಎಲ್ಲಾ ಪ್ರಕ್ರಿಯೆಯು ಸಂರಕ್ಷಣೆ ತಂತ್ರಾಂಶದ ಮೂಲಕ ಮಾಡಲಾಗುತ್ತಿದೆ. ಇದು ಭಾರತ ಸರ್ಕಾರದ ಮಹತ್ವಾಕಾಂಕ್ಷೆ ಯೋಜನೆಯಾಗಿದ್ದು, ಕೇಂದ್ರ ಸರ್ಕಾರದ ಮಾರ್ಗಸೂಚಿ ಹಾಗೂ ಕಾಲಕಾಲಕ್ಕೆ ಹೊರಡಿಸಲಾಗುವ ಕೇಂದ್ರ ಹಾಗೂ ರಾಜ್ಯ ಸರ್ಕಾರದ ಆದೇಶಗಳನ್ವಯ ಸದರಿ ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತಿದೆ. |

ನಂ: HORTI/348/HGM/2020-admn-Horti-Sec

(ನಾರಾಯಣ ಗೌಡ)

ತೋಟಗಾರಿಕೆ, ಪೌರಾಡಳಿತ ಮತ್ತು

ರೇಷ್ಮೆ ಸಚಿವರು